ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/17/ಸಿಡಿಸಿ(2)/ಇ-ಗೆ/2013-14 /3117

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 08-09-2017

**-:ಸುತ್ತೋಲೆ:-**

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಐಐಟಿ ಬಾಂಬೆಯವರು "Spoken Tutorials Project" ಅಡಿ FOSS ಗಳ ಬಗ್ಗೆ ಕಾರ್ಯಾಗಾರ ನಡೆಸುವ ಕುರಿತು.

ಉಲ್ಲೇಖ: ಈ ಕಛೇರಿ ಪತ್ರ ಸಂಖ್ಯೆ:ಡಿಟಿಇ/17/ಸಿಡಿಸಿ(2)ಇ-ಗೆ/FOSS/2013-14, ದಿ:29-07-2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಐಐಟಿ ಬಾಂಬೆಯವರು ಎಮ್‌ಹೆಚ್‌ಆರ್‌ಡಿ ವತಿಯಿಂದ ಉಚಿತವಾಗಿ ನಡೆಸುತ್ತಿರುವ "Spoken Tutorials Project" ಅವಲಂಬಿತ FOSS ಅಡಿಯ ತರಬೇತಿಯನ್ನು ಸಂಬಂಧಪಟ್ಟ ಸಂಸ್ಥೆಯ ವಿದ್ಯಾರ್ಥಿಗಳು ಪಡೆದುಕೊಳ್ಳಲು ತಿಳಿಸಿರುವುದು ಸರಿಯಷ್ಟೇ.

ತಾಂತ್ರಿಕ ಶಿಕ್ಷಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರು/ಸಂಯೋಜನಾಧಿಕಾರಿಗಳು ಕೂಡಲೇ ಶೈಕ್ಷಣಿಕ ಹಿತ ದೃಷ್ಟಿಯಿಂದ 2017-18ನೇ ಸಾಲಿನ ಪಠ್ಯಕ್ರಮಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತಹ ಹಾಗೂ ಅತ್ಯವಶ್ಯಕವಾಗಿ ಬೇಕಾಗಿರುವಂತಹ FOSS ಅಡಿಯ ತರಬೇತಿಗಳನ್ನು ಇ-ಬ್ರೋಚರ್‌ನಿಂದ ಆದ್ಯತೆ ಮೇರೆಗೆ ಆಯ್ಕೆ ಮಾಡಿಕೊಂಡು ತರಬೇತಿ ಪಡೆದುಕೊಳ್ಳಬೇಕಾಗಿರುತ್ತದೆ. ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಸಂಸ್ಥೆಗಳ ಪ್ರಾಂಶುಪಾಲರು/ಸಂಯೋಜನಾಧಿಕಾರಿಗಳು ಐಐಟಿ ಬಾಂಬೆ "Spoken Tutorials Project" ನ ತರಬೇತಿಯ ಕರ್ನಾಟಕದ ಸಂಯೋಜಕರಾದ ಶ್ರೀಮತಿ ಅನುಶ್ರೀ ಧರ್ಮಾಧಿಕಾರಿ ರವರನ್ನು ಈ ಕೆಳಕಂಡ ಮೊಬೈಲ್ ಮತ್ತು ಇ-ಮೇಲ್ ವಿಳಾಸದಲ್ಲಿ ಸಂಪರ್ಕಿಸಿ, ಅವರಿಂದ "Spoken Tutorials Project" ಕಾರ್ಯಾಗಾರಗಳನ್ನು ಪರಿಣಾಮಕಾರಿಯಾಗಿ ನಡೆಸಲು ಮಾರ್ಗದರ್ಶನ ಪಡೆಯಬೇಕೆಂದು ಸೂಚಿಸಲಾಗಿದೆ.

ಮುಂದುವರೆದು ಇಲ್ಲಿಯವರೆಗೂ FOSS ಅಡಿಯಲ್ಲಿ ಪಡೆಯಲಾದ ತರಬೇತಿಗಳ ಮಾಹಿತಿಗಳನ್ನು ನಿರ್ದೇಶನಾಲಯಕ್ಕೆ ಮರು ಟಪಾಲಿನಲ್ಲೇ ಹಾಗೂ "Spoken Tutorials Project"ನ ತರಬೇತಿಯ ಕರ್ನಾಟಕದ ಸಂಯೋಜಕರಾದ ಶ್ರೀಮತಿ ಅನುಶ್ರೀ ಧರ್ಮಾಧಿಕಾರಿಯವರಿಗೆ ಇ-ಮೇಲ್ ಮೂಲಕ ರವಾನಿಸಲು ಸಂಸ್ಥೆಯ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

**ಶ್ರೀಮತಿ ಅನುಶ್ರೀ ಧರ್ಮಾಧಿಕಾರಿ, ತರಬೇತಿ ಸಂಯೋಜಕರು, ಕರ್ನಾಟಕ, ಮೊಬೈಲ್ ಸಂಖ್ಯೆ: +91 9172113360**

**ಇ-ಮೇಲ್: dharmadhikarianushree@gmail.com,**

ಜಂಟಿ ನಿರ್ದೇಶಕರು(ಸಿಡಿಸಿ)
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ.

1. ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು(ಆಡಳಿತ) ರವರ ಮಾಹಿತಿಗಾಗಿ.
4. ತರಬೇತಿ ಸಂಯೋಜಕರು, ಕರ್ನಾಟಕ "Spoken Tutorials Project", IIT Bombay, ಇವರ ಮಾಹಿತಿಗೆ.
5. ನಿರ್ದೇಶಕರ ಆಪ್ತ ಶಾಖೆ, ತಾಂತ್ರಿಕ ಶಿಕ್ಷಣ ಇಲಾಖೆ ರವರ ಮಾಹಿತಿಗಾಗಿ.
6. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.